**All India Radio: Bangalore**
**National Bulletin In Kannada**
**05.06.2026  19.35 hrs**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**05.06.2026  19.35  hrs**

**<>><><*><><<>**

ಮುಖ್ಯಾಂಶಗಳು

**೧. ಸೂರತ್‌ನಲ್ಲಿ ೧೮ ಸಾವಿರದ ೮೦೦ ಕೋಟಿ ರೂಪಾಯಿಗೂ ಅಧಿಕ ವೆಚ್ಚದ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಪ್ರಧಾನಿ ಚಾಲನೆ**

**೨. ಭಾರತದಲ್ಲಿ ಡಿಜಿಟಲ್ ಮೂಲಸೌಕರ್ಯಕ್ಕಾಗಿ ಏರ್‌ಟ್ರಂಕ್‌ನಿಂದ ೩ ಲಕ್ಷ ಕೋಟಿ ರೂಪಾಯಿ ಬಂಡವಾಳ ಹೂಡಿಕೆ ಪ್ರಕಟ- ಪ್ರಧಾನಮಂತ್ರಿ ನರೇಂದ್ರ ಮೋದಿ**

**೩. ಅಂದಾಜು ಶೇಕಡಾ ೭.೭ರ ಬೆಳವಣಿಗೆಯ ನೈಜ ಜಿಡಿಪಿಯೊಂದಿಗೆ ಬಲವಾದ ವೇಗ ಕಾಯ್ದುಕೊಂಡ ದೇಶದ ಆರ್ಥಿಕತೆ**

**೪. ತಂತ್ರಜ್ಞಾನ  ಆಧರಿತ ದಕ್ಷಗಡಿ ನಿರ್ವಹಣಾ ಯೋಜನೆ ಮುಂದಿನ ವರ್ಷ ಪ್ರಾಯೋಗಿಕವಾಗಿ ಜಾರಿ - ಗೃಹ ಸಚಿವ ಅಮಿತ್ ಶಾ**

**೫. ೧೮ ವರ್ಷದೊಳಗಿನ ಪುರುಷರ ಏಷ್ಯಾ ಹಾಕಿ ಕಪ್; ಪಾಕಿಸ್ತಾನ ಮಣಿಸಿ, ಫೈನಲ್ ಪ್ರವೇಶಿಸಿದ ಭಾರತ ತಂಡ**

**<>><><*><><<>**

ಪ್ರಧಾನಿ ನರೇಂದ್ರ ಮೋದಿ ಸೂರತ್‌ನಲ್ಲಿಂದು ರಸ್ತೆ, ವಿದ್ಯುತ್ ಮತ್ತು  ಕೈಗಾರಿಕಾ ಕ್ಷೇತ್ರಗಳಿಗೆ ಸಂಬಂಧಿಸಿದ ೧೮ ಸಾವಿರದ ೮೦೦ ಕೋಟಿ ರೂಪಾಯಿಗೂ ಅಧಿಕ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಸಾರ್ವಜನಿಕರನ್ನುದ್ದೇಶಿಸಿ ಮಾತನಾಡಿದ ಪ್ರಧಾನಿ, ಈ ಉಪಕ್ರಮಗಳು ಬೆಳವಣಿಗೆಯ ಚಾಲಕಶಕ್ತಿಯಾಗಿದ್ದು, ಜನತೆಯ ಸುಗಮ ಜೀವನ ಉತ್ತಮಪಡಿಸಲಿವೆ ಎಂದರು. ಪರಿಸರ ದಿನದ ಸಂದರ್ಭದಲ್ಲಿ ದೇಶದ ಅತ್ಯಂತ ಸ್ವಚ್ಛ ನಗರಗಳಲ್ಲಿ ಒಂದಾದ ಸೂರತ್‌ನಲ್ಲಿ ಇರುವ ಬಗ್ಗೆ ಸಂತಸ ವ್ಯಕ್ತಪಡಿಸಿದ ಅವರು, ವಿಶ್ವ ಕ್ರಮೇಣವಾಗಿ ಹಸಿರು ಭವಿಷ್ಯದತ್ತ ಸಾಗುತ್ತಿದ್ದು, ಭಾರತ ಇದಕ್ಕೆ ಸಕ್ರಿಯ ಕೊಡುಗೆ ನೀಡುತ್ತಿದೆ ಎಂದರು. ಈ ಶತಮಾನದ ಆರಂಭದಲ್ಲಿಯೇ ಗುಜರಾತ್ ಸರ್ಕಾರ, ನವೀಕರಿಸಬಹುದಾದ ಇಂಧನ ಇಲಾಖೆಯನ್ನು ಸ್ಥಾಪಿಸಿದ್ದು, ಪಠಾಣ್ ಜಿಲ್ಲೆಯ ಚರಂಕಾ ಗ್ರಾಮದಲ್ಲಿ ದೇಶದ ಮೊದಲ ಸೌರ

ಉದ್ಯಾನ ಅಭಿವೃದ್ಧಿಪಡಿಸಲಾಯಿತು ಎಂದು ತಿಳಿಸಿದ್ದಾರೆ. ಇಂದು ಮಧ್ಯಾಹ್ನ ಪ್ರಧಾನಿ ಅವರು, ಹಜಿರಾಗೆ ಭೇಟಿ ನೀಡಿ, ಔದ್ಯಮಿಕ ಹಾಗೂ ಮೂಲಸೌಕರ್ಯ ಕಾರ್ಯಾಚರಣೆ ವೀಕ್ಷಿಸಿದರು. ಪ್ರಧಾನಿ ಅವರು ಈ ಸಂಜೆ ದಮನ್‌ಗೆ ಭೇಟಿ ನೀಡಿ, ೨ ಸಾವಿರದ ೯೭೦ ಕೋಟಿ ರೂಪಾಯಿ ವೆಚ್ಚ ವಿವಿಧ ಯೋಜನೆಗಳ ಉದ್ಘಾಟನೆ ಹಾಗೂ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ.

**<>><><*><><<>**

ಭಾರತದ ಡಿಜಿಟಲ್ ಮೂಲಸೌಕರ್ಯ ಪಯಣ ಗಮನಾರ್ಹ ಚಲನಶೀಲತೆಯನ್ನು ಕಂಡುಕೊಳ್ಳುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಭಾರತದಲ್ಲಿ ಏರ್‌ಟ್ರಂಕ್ ಸುಮಾರು ೩ ಲಕ್ಷ ಕೋಟಿ ರೂಪಾಯಿ ಬಂಡವಾಳ ಹೂಡಿಕೆಯ ಯೋಜನೆ ಪ್ರಕಟಿಸಿದೆ. ಇದಲ್ಲದೆ, ೫ ಗಿಗಾ ವ್ಯಾಟ್ ಸಾಮರ್ಥ್ಯದ ಡೇಟಾ ಕೇಂದ್ರ ಅಭಿವೃದ್ಧಿಪಡಿಸುವುದಾಗಿ ಘೋಷಿಸಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಸಾಮಾಜಿಕ ಮಾಧ್ಯಮದಲ್ಲಿ ತಿಳಿಸಿದ್ದಾರೆ. ಇದು ದೇಶದ ಡಿಜಿಟಲ್ ಮೂಲಸೌಕರ್ಯ ವ್ಯವಸ್ಥೆಯಲ್ಲಿನ ಅತಿದೊಡ್ಡ ಬಂಡವಾಳ ಹೂಡಿಕೆ ಪ್ರಸ್ತಾಪವಾಗಿದೆ ಎಂದು ಅವರು ತಿಳಿಸಿದ್ದಾರೆ. ಇಂತಹ ಬಂಡವಾಳ ಹೂಡಿಕೆಗಳು ಕ್ಲೌಡ್ ಕಂಪ್ಯೂಟಿಂಗ್ ಮತ್ತು ಕೃತಕಬುದ್ಧಿಮತ್ತೆ- ಎಐಗಳಲ್ಲಿ ಭಾರತವನ್ನು ಜಾಗತಿಕ ಕೇಂದ್ರವಾಗಿಸುವಲ್ಲಿ ಬಲ ನೀಡಲಿದೆ. ಉದ್ಯೋಗಾವಕಾಶ ಸೃಷ್ಟಿಸುವುದರ ಜೊತೆಗೆ ಸ್ಥಳೀಯ ಪೂರೈಕೆ ಸರಪಳಿ ಬೆಂಬಲಿಸಲಿದೆ ಮತ್ತು ನಾವಿನ್ಯತೆ ನೇತೃತ್ವದ ಬೆಳವಣಿಗೆಯ ವೇಗವರ್ಧಿಸಲಿದೆ ಎಂದು ಅವರು ಹೇಳಿದ್ದಾರೆ. ವಿಶ್ವದ ಡಿಜಿಟಲ್ ಆರ್ಥಿಕತೆಯ ಭವಿಷ್ಯ ಹೆಚ್ಚಿನದಾಗಿ ಭಾರತದಲ್ಲಿಯೇ ನಿರೂಪಣೆಗೊಳ್ಳಲಿದೆ ಎಂಬುದು ಇದರಿಂದ ಸ್ಪಷ್ಟವಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ತಿಳಿಸಿದ್ದಾರೆ.

**<>><><*><><<>**

ದೇಶದ ಆರ್ಥಿಕತೆ ೨೦೨೫-೨೬ ರಲ್ಲಿ ಅಂದಾಜು ಶೇಕಡಾ ೭.೭ ಬೆಳವಣಿಗೆಯ ನೈಜ ಒಟ್ಟು ದೇಶಿಯ ಉತ್ಪನ್ನದೊಂದಿಗೆ ಬಲವಾದ ವೇಗವನ್ನು ಕಾಯ್ದುಕೊಂಡಿದೆ. ಸಾಂಖ್ಯಿಕ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯ ಇಂದು ಬಿಡುಗಡೆ ಮಾಡಿದ ತಾತ್ಕಾಲಿಕ ವಾರ್ಷಿಕ ಜಿಡಿಪಿ ಅಂದಾಜು ವರದಿಯಲ್ಲಿ ಈ ವಿಷಯ ಸ್ಪಷ್ಟಪಡಿಸಲಾಗಿದೆ. ೨೦೨೪-೨೫ ರಲ್ಲಿ ಈ ಬೆಳವಣಿಗೆ ಶೇಕಡ ೭.೧ ರಷ್ಟಿತ್ತು. ೨೦೨೫-೨೬ ರಲ್ಲಿ ಒಟ್ಟು ದೇಶೀಯ ಉತ್ಪನ್ನ ೩೨೩ ಲಕ್ಷ ಕೋಟಿ ರೂಪಾಯಿ ಹಂತ ತಲುಪಲಿದೆ ಎಂದು ಅಂದಾಜಿಸಲಾಗಿದೆ. ಕೃಷಿ ಮತ್ತು ಮೀನುಗಾರಿಕೆ ವಲಯದ ಉತ್ತಮ ಸಾಧನೆಯಿಂದಾಗಿ ಪ್ರಾಥಮಿಕ ವಲಯ ಶೇಕಡಾ ೩.೨ ರ ಬೆಳವಣಿಗೆ ದರ ಸಾಧಿಸಿದೆ ಎಂದು ಗಮನಿಸಲಾಗಿದೆ. ತಯಾರಿಕಾ ವಲಯ, ವ್ಯಾಪಾರ, ಹೋಟೆಲ್, ಸಾರಿಗೆ, ಸಂಪರ್ಕ ಮತ್ತು ಪ್ರಸಾರಕ್ಕೆ ಸಂಬಂಧಿಸಿದ ಸೇವೆ ಹಾಗೂ ರಿಯಲ್ ಎಸ್ಟೇಟ್ ಕ್ಷೇತ್ರಗಳು ಕಳೆದ ಹಣಕಾಸು ವರ್ಷದಲ್ಲಿ ಎರಡಂಕಿಯ ಬೆಳವಣಿಗೆ ದಾಖಲಿಸಿವೆ. ೨೦೨೫-೨೬ರ ನಾಲ್ಕನೇ ತ್ರೈಮಾಸಿಕದಲ್ಲಿ

ನೈಜ ಜಿಡಿಪಿಯಲ್ಲಿ ಶೇಕಡಾ ೭.೮ ರ ಬೆಳವಣಿಗೆ ಅಂದಾಜಿಸಲಾಗಿದೆ. ೨೦೨೫-೨೬ ಹಣಕಾಸು ವರ್ಷದಲ್ಲಿ ಸಾಧಿಸಲಾದ ಶೇಕಡಾ ೭.೭ರ ಜಿಡಿಪಿ ಅಭಿವೃದ್ಧಿ ದರ ಹಾಗೂ ನಾಲ್ಕನೇ ತ್ರೈಮಾಸಿಕದಲ್ಲಿ ಸಾಧಿಸಲಾದ ಶೇಕಡಾ ೭.೮ ರ ಬೆಳವಣಿಗೆ ದರ ಭಾರತದ ಪಾರಂಪರಿಕ ಬಲವನ್ನು ಪತಿಫಲಿಸುತ್ತದೆ ಎಂದು ಪ್ರಧಾನಿ ನರೇಂದ್ರ ಮೋದಿ ಸಾಮಾಜಿಕ ಮಾಧ್ಯಮದಲ್ಲಿ ತಿಳಿಸಿದ್ದಾರೆ.

**<>><><*><><<>**

ನೇಪಾಳದ ವಿದೇಶಾಂಗ ವ್ಯವಹಾರ ಖಾತೆ ಸಚಿವ ಶಿಸಿರ್ ಖನಾನ್ ಮೂರು ದಿನಗಳ ಭಾರತ ಭೇಟಿಗಾಗಿ ನವದೆಹಲಿಗೆ ಇಂದು ಆಗಮಿಸಿದರು. ಭಾರತದ ವಿದೇಶಾಂಗ ಖಾತೆ ಸಚಿವ ಡಾ.ಎಸ್.ಜೈಶಂಕರ್ ಅವರ ಆಹ್ವಾನದ ಮೇರೆಗೆ ಶಿಶಿರ್ ಅನಾಲ್ ಆಗಮಿಸಿದ್ದು, ನಾಳೆ ಉಭಯ ನಾಯಕರು ಸಮಾಲೋಚನೆ ನಡೆಸಲಿದ್ದಾರೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ವಕ್ತಾರ ರಣದೀರ್ ಜೈಸ್ವಾಲ್ ತಿಳಿಸಿದ್ದಾರೆ. ವ್ಯಾಪಾರ, ವಾಣಿಜ್ಯ, ಬಂಡವಾಳ ಹೂಡಿಕೆ ಮತ್ತು ಅಭಿವೃದ್ಧಿ ಸಹಕಾರ ಕುರಿತಂತೆ ನಾಯಕರು ಮಾತುಕತೆ ನಡೆಸಲಿದ್ದಾರೆ.

**<>><><*><><<>**

ತಂತ್ರಜ್ಞಾನ ಆಧರಿತ ದಕ್ಷಗಡಿ ನಿರ್ವಹಣಾ ಯೋಜನೆಯನ್ನು ಮುಂದಿನ ವರ್ಷ ಪ್ರಾಯೋಗಿಕವಾಗಿ ಜಾರಿಗೊಳಿಸಲಾಗುವುದು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ. ತ್ರಿಪುರಾದ ಭಾರತ-ಬಾಂಗ್ಲಾದೇಶ ಅಂತಾರಾಷ್ಟ್ರೀಯ ಗಡಿಯಲ್ಲಿರುವ ಲಂಕಾಮುರ ಗಡಿ ಔಟ್‌ಪೋಸ್ಟ್‌ನಲ್ಲಿ ಪ್ರಹರಿ ಸಮ್ಮೇಳನ ಉದ್ದೇಶಿಸಿ ಅವರು ಮಾತನಾಡಿ, ದಕ್ಷಗಡಿ ನಿರ್ವಹಣಾ ಯೋಜನೆಯನ್ನು ೭-೮ ಸೂಕ್ಷ್ಮ ಪ್ರದೇಶಗಳಲ್ಲಿ ಪ್ರಾಯೋಗಿಕವಾಗಿ ಅನುಷ್ಠಾನಕ್ಕೆ ತರಲಾಗುವುದು ಎಂದು ತಿಳಿಸಿದರು. ದೇಶದ ಸುರಕ್ಷತೆ ಮತ್ತು ಭದ್ರತೆ ಅತ್ಯಂತ ಅವಶ್ಯಕವಾಗಿದ್ದು, ಮಾದಕ ದ್ರವ್ಯ, ಮಾನವ ಕಳ್ಳಸಾಗಾಟ, ಅಕ್ರಮ ಗೋವು ಸಾಗಾಟಗಳನ್ನು ಸಂಪೂರ್ಣವಾಗಿ ತಡೆಗಟ್ಟುವುದು ಅತ್ಯಗತ್ಯ ಎಂದರು. ಪರಿಸರ ದಿನದ ಅಂಗವಾಗಿ ಏರ್ಪಡಿಸಲಾಗಿದ್ದ ಸಾಮೂಹಿಕ ಸಸಿ ನೆಡುವ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಗೃಹ ಸಚಿವ ಅಮಿತ್ ಶಾ, ಗಿಡವೊಂದನ್ನು ನೆಟ್ಟರು. ಕೇಂದ್ರೀಯ ಸಶಸ್ತ್ರ ಪೊಲೀಸ್ ಪಡೆ ೨೦೧೯ ರಿಂದ ಇದುವರೆಗೆ ದೇಶದಲ್ಲಿ ಒಟ್ಟು ೬ ಕೋಟಿ ೪೦ ಲಕ್ಷಕ್ಕೂ ಅಧಿಕ ಸಸಿಗಳನ್ನು ನೆಟ್ಟಿದೆ ಎಂದು ಈ ಸಂದರ್ಭದಲ್ಲಿ ಅವರು ತಿಳಿಸಿದರು. ಇದಕ್ಕೂ ಮುನ್ನ ಅಗರ್ತಲಾದ ಕುಂಜ್‌ಬನ್‌ದಲ್ಲಿರುವ ಐತಿಹಾಸಿಕ ೧೯೧೭ರ ಪುಷ್ಪಬಂತ ಅರಮನೆಯನ್ನು ಪ್ಯಾಲೆಸ್ ಹೋಟೆಲ್ ಆಗಿ ಪರಿವರ್ತಿಸುವ ಕಾಮಗಾರಿಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಇಂದು ಶಿಲಾನ್ಯಾಸ ನೆರವೇರಿಸಿದರು.

**<>><><*><><<>**

ಅಂಡಮಾನ್ ದ್ವೀಪದ ಪೂರ್ವ ಕರಾವಳಿಯ ಸುಮಾರು ೧೫ ಕಿಲೋಮೀಟರ್ ದೂರದಲ್ಲಿರುವ ಶ್ರೀವಿಜಯಪುರಂ-೨ ಪ್ರದೇಶದಲ್ಲಿ ನೈಸರ್ಗಿಕ ಅನಿಲ ಪತ್ತೆಯಾಗಿದೆ ಎಂದು ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಖಾತೆ ಸಚಿವ ಹರ್ದೀಪ್‌ಸಿಂಗ್ ಪುರಿ ಪ್ರಕಟಿಸಿದ್ದಾರೆ. ಅಂಡಮಾನ್ ಸಮುದ್ರ ಪ್ರದೇಶದಲ್ಲಿ ವ್ಯಾಪಕ ಇಂಧನ ಸಾಮರ್ಥ್ಯ ಇರುವುದನ್ನು ಈ ಪರಿಶೋಧನೆ ಸಾಬೀತುಪಡಿಸಿದೆ ಎಂದು ಅವರು ಸಾಮಾಜಿಕ ಮಾಧ್ಯಮದಲ್ಲಿ ತಿಳಿಸಿದ್ದಾರೆ. ಸುಮಾರು ೨೫೫ ಮೀಟರ್ ನೀರಿನಾಳದಲ್ಲಿ ನೈಸರ್ಗಿಕ ಅನಿಲ ನಿಕ್ಷೇಪ ಪತ್ತೆಯಾಗಿದೆ ಎಂದು ಸಚಿವ ಹರ್ದೀಪ್‌ಸಿಂಗ್ ಪುರಿ ಮಾಹಿತಿ ನೀಡಿದ್ದಾರೆ.

**<>><><*><><<>**

ಅಸ್ಸಾಂ ಸಚಿವ ಸಂಪುಟವನ್ನು ಇಂದು ವಿಸ್ತರಿಸಲಾಗಿದೆ. ಗುವಾಹಟಿಯ ಜ್ಯೋತಿ ಬಿಷ್ಣು ಅಂತಾರ್ಜತಿಕ ಕಲಾಮಂದಿರದಲ್ಲಿ ನಡೆದ ಸಮಾರಂಭದಲ್ಲಿ ೧೪ ಹೊಸ ಸಂಪುಟ ದರ್ಜೆ ಸಚಿವರು ಪ್ರಮಾಣವಚನ ಸ್ವೀಕರಿಸಿದರು. ಮುಖ್ಯಮಂತ್ರಿ ಹಿಮಂತ್ ಬಿಸ್ವಾ ಸರ್ಮಾ ಸಮ್ಮುಖದಲ್ಲಿ ರಾಜ್ಯಪಾಲ ಲಕ್ಷ್ಮಣ ಪ್ರಸಾದ್ ಆಚಾರ್ಯ ಅವರಿಂದ ನೂತನ ಸಚಿವರು ಅಧಿಕಾರ ಹಾಗೂ ಗೌಪತ್ಯೆಯ ಪ್ರಮಾಣವಚನ ಸ್ವೀಕರಿಸಿದರು. ಇದರಿಂದಾಗಿ ಅಸ್ಸಾಂ ಮಂತ್ರಿಮಂಡಲದ ಸದಸ್ಯರ ಸಂಖ್ಯೆ ೧೭ಕ್ಕೇರಿದೆ ಅಸ್ಸಾಂನಲ್ಲಿ ಮುಖ್ಯಮಂತ್ರಿ ಸೇರಿದಂತೆ ಗರಿಷ್ಠ ೧೯ ಸಚಿವ ಸ್ಥಾನಗಳಿಗೆ ಅವಕಾಶವಿದೆ.

**<>><><*><><<>**

ಭಾರತ, ೧೮ ವರ್ಷದೊಳಗಿನ ಪುರುಷರ ಏಷ್ಯಾ ಹಾಕಿ ಕಪ್‌ನ ಫೈನಲ್ ಪ್ರವೇಶಿಸಿದೆ. ಜಪಾನಿನ ಕಾಕಮಿಗಹರ ಹಾಕಿ ಕ್ರೀಡಾಂಗಣದಲ್ಲಿ ಇಂದು ನಡೆದ ಸೆಮಿಫೈನಲ್ ಪಂದ್ಯದಲ್ಲಿ ಭಾರತ, ಪಾಕಿಸ್ತಾನದ ವಿರುದ್ಧ ೫-೨ ಗೋಲುಗಳ ಅಂತರದಿಂದ ಜಯ ಗಳಿಸಿತು. ಪ್ರಶಸ್ತಿಗಾಗಿ ನಾಳೆ ನಡೆಯಲಿರುವ ಫೈನಲ್ ಪಂದ್ಯದಲ್ಲಿ ಭಾರತ, ಆತಿಥೇಯ ಜಪಾನ್ ತಂಡವನ್ನು ಎದುರಿಸಲಿದೆ.

**<>><><*><><<>**

ಗೋವಾದ ಮಾರ್ಗೋವಾದಲ್ಲಿ ನಾಳೆ ನಡೆಯಲಿರುವ ಸ್ಯಾಫ್ ಮಹಿಳಾ ಫುಟ್ಬಾಲ್ ಚಾಂಪಿಯನ್‌ಶಿಪ್‌ನ ಫೈನಲ್‌ನಲ್ಲಿ ಪಂದ್ಯದಲ್ಲಿ ಭಾರತ ತಂಡ, ಬಾಂಗ್ಲಾದೇಶವನ್ನು ಎದುರಿಸಲಿದೆ. ಪಂದ್ಯ ಸಂಜೆ ೬:೨೦ ಕ್ಕೆ ಆರಂಭವಾಗಲಿದೆ.

**<>><>< ಇಲ್ಲಿಗೆ ವಾರ್ತಾಪ್ರಸಾರ ಮುಕ್ತಾಯವಾಯಿತು ><><<>**

**<>><>< ನಮ್ಮ ಮುಂದಿನ ವಾರ್ತಾ ಪ್ರಸಾರ ನಾಳೆ ಬೆಳಗ್ಗೆ ೭.೦೫ ಕ್ಕೆ ><><<>**